(ಅ) ಮಂಗಳೂರು ತಾಲ್ಲೂಕನ್ನು ವಿಭಜನೆ ಗೊಳಿಸುವ ಬಗ್ಗೆ.

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು 45 ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ. ಜಿಲ್ಲೆಗಳ ವಿಭಜನೆಯಿಂದಾಗಿ ಕಾರ್ಕಳ ತಾಲ್ಲೂಕಿನಿಂದ ಹತ್ತು ಗ್ರಾಮಗಳಿಗಿಂತ ಹೆಚ್ಚಾಗಿ ಮಂಗಳೂರು ತಾಲ್ಲೂಕಿಗೆ ಸೇರಿಕೊಂಡು ಒಂದು ಮಹಾನಗರಪಾಲಿಕೆ, ನಾಲ್ಕು ನಗರ ಪಂಚಾಯಿತಿ, ಐದು ವಿಧಾನಸಭಾ ಕ್ಷೇತ್ರವನ್ನು ಹೊಂದಿಕೊಂಡು ಐದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿ ಇಡೀ ರಾಜ್ಯದಲ್ಲಿ ಅತ್ಯಂತ ದೊಡ್ಡ ತಾಲ್ಲೂಕು ಆಗಿದೆ. ಸದ್ಯ ಅಲ್ಲಿ ಒಬ್ಬರು ತಹಶೀಲ್ದಾರರು ಇದ್ದು ಅವರು ದೈನಂದಿನ ಕೆಲಸಗಳನ್ನು ಮಾಡಲು ಕಷ್ಟವಾಗಿದೆ. ವರ್ಷಕ್ಕೊಮ್ಮೆ ಬರುವ ಪ್ರಕೃತಿ ವಿಕೋಪದ ಸುಧಾರಣೆ, ಕೋಮುಗಲಭೆಗಳು, ಚಳುವಳಿಗಳು ಬಂದರೆ ಅದೇ ಕೆಲಸಕ್ಕೆ ಅವರ ಸೇವೆ ಸೀಮಿತವಾಗುತ್ತಿದೆ. ಬೇರೆ ಯಾವುದು ಅಭಿವೃದ್ಧಿಪರ ಕೆಲಸಗಳನ್ನು ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹಕ್ಕು ಪತ್ರಕೊಡುವಂಥದ್ದು, ಮನೆ ನಿವೇಶನ ಕೊಡತಕ್ಕದ್ದು, ರೇಷನ್ ಕಾರ್ಡ್‌ಗಳನ್ನು ಕೊಡತಕ್ಕದ್ದು ಇತ್ಯಾದಿ ಕೆಲಸಗಳು ಅಗಾಧ ಪ್ರಮಾಣದಲ್ಲಿ ಬಾಕಿ ಉಳಿದಿದೆ. ಜನ ಸಂಪರ್ಕ ಸಭೆಯನ್ನು ಕರೆದರೆ ತಾಲ್ಲೂಕು ಪಂಚಾಯಿತಿಯಿಂದಾಗಲಿ, ತಾಲ್ಲೂಕು ಸಮಿತಿಯಿಂದಾಗಲಿ ಯಾರು ಹಾಜರಾಗುತ್ತಿಲ್ಲ. ಎಲ್ಲರು ಕೆಲಸದ ಒತ್ತಡ ಎಂದು ಹೇಳುತ್ತಿದ್ದಾರೆ. ಇದರಿಂದ ಎಲ್ಲಾ ಕೆಲಸಕಾರ್ಯಗಳು ಸ್ಥಗಿತವಾಗಿದೆ. ಆದ್ದರಿಂದ ತಕ್ಷಣ ಮಂಗಳೂರು ತಾಲ್ಲೂಕನ್ನು ವಿಭಜನೆಗೊಳಿಸಬೇಕು, ಅಲ್ಲಿಯವರೆಗೆ ಅಲ್ಲಿಗೆ ಇಬ್ಬರು ತಹಶೀಲ್ದಾರರನ್ನು ನೇಮಕ ಮಾಡಬೇಕು. ಹಾಲಿ ಅಲ್ಲಿ ಅಸಿಸ್ಟೆಂಟ್ ಕಮೀಷನರ್ ಒಬ್ಬರು ಇದ್ದಾರೆ, ಅವರಿಗೆ ಕನ್ನಡ ಬರುವುದಿಲ್ಲ. ಜನಸಾಮಾನ್ಯರು ಅವರನ್ನು ಭೇಟಿ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಅಲ್ಲಿಗೆ ಒಬ್ಬರು ಕನ್ನಡ ಬಲ್ಲ ಅಸಿಸ್ಟೆಂಟ್ ಕಮೀಷನರ್ ರವರನ್ನು ನೇಮಕ ಮಾಡಬೇಕು. ಆಡಳಿತವನ್ನು ಚುರುಕಗೊಳಿಸಬೇಕು. ಸುಮಾರು ನಲವತ್ತು ವಾಹನ ಚಾಲಕರ ಹುದ್ದೆ ಖಾಲಿ ಇದೆ. ಅಂಥ ದುರ್ಗತಿ ಮಂಗಳೂರು ತಾಲ್ಲೂಕಿಗೆ ಬಂದಿದೆ. ಕೆ.ಡಿ.ಪಿ. ಸಭೆಯಲ್ಲಿ ಉಸ್ತುವಾರಿ ಸಚಿವರ ಸಭೆಯಲ್ಲಿ ಸಹ ಇದರ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡಿದ್ದೇನೆ. ಆದ್ದರಿಂದ ತಕ್ಷಣ ಮಂಗಳೂರು ತಾಲ್ಲೂಕನ್ನು ಎರಡು ಭಾಗ ಮಾಡಬೇಕು, ಮಂಗಳೂರು ತಾಲ್ಲೂಕು ಪಂಚಾಯಿತಿಗೆ ಐದು ಜನ ರೆವಿನ್ಯೂ ಇನ್ಸ್‌ಪೆಕ್ಟರ್ ಗಳನ್ನು ನೇಮಕ ಮಾಡಿ ಹೊಸ ಕಾರ್ಯಕಲ್ಪ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆ. ಬಹಳಷ್ಟು ಕಡತಗಳು ವಿಲೇವಾರಿಗೆ ಬಾಕಿ ಉಳಿದಿದೆ. ಅವುಗಳನ್ನೆಲ್ಲಾ ತಕ್ಷಣ ವಿಲೇವಾರಿ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು :— ಕಂದಾಯ ಸಚಿವರು ಇಲ್ಲ. ದಯಮಾಡಿ ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಮಾತ್ರ ಇಲ್ಲಿ ಕುಳಿತುಕೊಂಡಿರಬೇಕು. ಆದರೆ

ಸಂಬಂಧಪಟ್ಟ ಸಚಿವರಿಗೆ ಏನೇನು ನೋಟೀಸ್‌ಗಳು ಬಂದಿದೆ ಆದರೂ ಸಹ ಅವರು ಇಲ್ಲವೆಂದರೆ ಹೇಗೆ?

SRI M.C. NANAIAH: Sir, I request the Speaker to kindly hold on. Let the Minister come and answer this on Monday or tomorrow.

ಅಧ್ಯಕ್ಷರು :— ಇದು ಮಾಡಿಸ್ಪಿ ಪ್ರಶ್ನೆ. I am just appealing to the Government. ಅವರು ಮೊನ್ನೆ ನೋಟೀಸ್ ಕೊಟ್ಟಿದ್ದಾರೆ, ನಿನ್ನೆ ತಡವಾಗಿತ್ತು ಎಂದು ಇವತ್ತು ಚರ್ಚೆಗೆ ಬಂದಿದೆ, ಇವತ್ತು ಅದನ್ನು ಇಷ್ಟೊತ್ತಿನಲ್ಲಿ ತೆಗೆದುಕೊಳ್ಳುತ್ತಿದ್ದೇವೆ, ಆದರೆ ಸಂಬಂಧಪಟ್ಟ ಸಚಿವರು ಇಲ್ಲ, ಹೀಗಾದರೆ ನಾನು ಹೇಗೆ ವರ್ತಿಸಬೇಕು? ನನಗೆ ಇಂಟಿಮೇಷನ್ ಸಹ ಕೊಡುವುದಿಲ್ಲ, ಹೊರಟು ಹೋಗುತ್ತೀರಿ, ಅಂದರೆ ನಾನು ವಿರೋಧ ಪಕ್ಷದ ನಾಯಕರು, ಈಶ್ವರಪ್ಪನವರು, ವಾಟಾಳ್ ನಾಗರಾಜ್‌ರವರು ಕೆಲಸವಿಲ್ಲದವರಾ? ತಮಗೆ ಬಹಳ ಜವಾಬ್ದಾರಿ ಇರುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಲು ನಾವಿದ್ದೇವೆ, not according to the wishes of the House. ನಾವು ಸದನ ಸೇರಿ ಮೂರು ದಿವಸಗಳಾಗಿಲ್ಲ, ಈ ರೀತಿಯಾದರೆ ಹೇಗೆ?

ಅಧ್ಯಕ್ಷರು :— ಒಂದು ವೇಳೆ ಬೇರೆ ಏನಾದರೂ ಕೆಲಸವಿದ್ದರೆ ನನಗೆ ತಿಳಿಸಿ ಹೋಗಬೇಡವೆ? ನನಗೆ ತಿಳಿಸುವುದೂ ಇಲ್ಲ, ಇಲ್ಲಿ ಇರುವುದೂ ಇಲ್ಲ, ನಾನು ಸಭೆ ಪ್ರಾರಂಭವಾದಾಗಲೇ ಇವತ್ತು ಹೆಚ್ಚು ಸಮಯ ಕುಳಿತುಕೊಳ್ಳಬೇಕಾಗುತ್ತದೆಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ತಾವು ಮೊದಲೆ ಇಂದು ರಾತ್ರಿ ಎಂಟುಗಂಟೆಯವರೆಗೆ ಕುಳಿತುಕೊಳ್ಳುವುದಾಗಿ ತಿಳಿಸಿದ್ದೀರಿ, ಈ ಸದನದ ಗೌರವವನ್ನು ಹಾಳುಮಾಡುತ್ತಿದ್ದಾರೆ, ಬಹಳಷ್ಟು ಸದಸ್ಯರುಗಳು, ಸಚಿವರುಗಳೂ ಇಲ್ಲ, ಇವರಿಗೆ ಜವಾಬ್ದಾರಿ ಬೇಡವೆ?

ಶ್ರೀ ಸಿ. ಬೈರೇಗೌಡ :— ನಾನು ಇದರ ಬಗ್ಗೆ ಕ್ಷಮೆಯಾಚಿಸುತ್ತೇನೆ.

ಅಧ್ಯಕ್ಷರು :— ತಾವು ಕ್ಷಮೆಯಾಚಿಸುವುದು ಬೇರೆ ವಿಚಾರ. ಮಾನ್ಯ ಮಂಜುನಾಥರವರು ಇಲ್ಲಿದ್ದಾರೆ. ಅವರು ಮೇಲ್ಮನೆಯಲ್ಲಿ ಪ್ರಸ್ಟೆಡಿಂಗ್ ಆಫೀಸರ್ ಆಗಿ ಕೆಲಸ ಮಾಡಿದ್ದಾರೆ. ತಾವು ಹಿರಿಯ ಸಚಿವರು, ನಾಣಯ್ಯನವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದು ಹಾಲಿ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದಾರೆ.

ತಮಗೆ ನಮ್ಮ ವ್ಯವಸ್ಥೆ ಗೊತ್ತೇ ಇದೆ. ನಮಗೇಕೆ ಇಷ್ಟು ಲಘುವಾಗಿ ತಾವುಗಳು ಕಾಣುತ್ತೀರಿ ಎಂಬ ನೋವು ಆಗುತ್ತದೆ. ನಾವು ಏನಾದರೂ ಮಾತನಾಡಿದರೆ ಅದಕ್ಕೆ ಬೇರೆ ನೋಟೀಸನ್ನು ಅಟ್ರಿಬ್ಯೂಟ್ ಮಾಡುತ್ತೀರಿ. Are we here to pocket all theseinsults and go home? ಇಂಥ ನಡವಳಿಕೆಯಿಂದ ತಮ್ಮ ಸರ್ಕಾರಕ್ಕೆ ಗೌರವ ಬರುತ್ತದೆಯೇ?

ಶ್ರೀ ಸಿ. ಬೈರೇಗೌಡರು :— ನಾನು ಇದರ ಬಗ್ಗೆ ಸದನದಲ್ಲಿ ಕ್ಷಮೆಯಾಚಿಸುವೆ.

ಅಧ್ಯಕ್ಷರು ಇದರ ಬಗ್ಗೆ ಉತ್ತರವನ್ನು ನಾಳೆ ಸಂಬಂಧಪಟ್ಟ ಸಚಿವರು ಬಂದು ಕೊಡುತ್ತಾರೆ. ಆ ಮಂತ್ರಿಗಳು ನಾನು ಬರುವುದಕ್ಕಾಗುವುದಿಲ್ಲ, ನನ್ನ ಪರವಾಗಿ ಇಂಥವರು ಉತ್ತರ ಕೊಡುತ್ತಾರೆಂದು ನನಗೇನೂ ಪತ್ರವನ್ನು ಬರೆದು ತಿಳಿಸಿಲ್ಲ. ಬೇರೆ ಸಚಿವರ್ಯಾರಾದರು ಎದ್ದು ನಿಂತು ಏನಾದರೂ ಹೇಳಲು ನಾನು ಅವಕಾಶ ಕೊಡುವುದಿಲ್ಲ. ತಾವು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪ ಮಾಡಿ ನಿನ್ನೆಯಿಂದ ಶಿಸ್ತಿನಿಂದ ತಾಳ್ಮೆಯಿಂದ ಕಾದಿದ್ದೀರಿ. ತಮ್ಮನ್ನು ಗೌರವದಿಂದ ಕಾಣತಕ್ಕ ಜವಾಬ್ದಾರಿ ನನಗಿದೆ. ಸಂಬಂಧಪಟ್ಟ ಸಚಿವರನ್ನೇ ಕರೆಸಿ ನಾಳೆ ಅವರಿಂದಲೇ ಉತ್ತರವನ್ನು ಕೊಡಿಸುತ್ತೇನೆ.

(೫) ಹಾಸನ ಜಿಲ್ಲಾ ಸಹಕಾರಿ ಬ್ಯಾಂಕ್ ನೌಕರರ ಮುಷ್ಕರ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :— ಮಾನ್ಯ ಅಧ್ಯಕ್ಷರೆ, ಹಾಸನದ ಜಿಲ್ಲಾ ಸಹಕಾರಿ ಬ್ಯಾಂಕ್‌ನ ನೌಕರರು ಕೆಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು 22-3-1999ರಿಂದ ಸಾಂಕೇತಿಕವಾಗಿ ಮುಷ್ಕರ ಪ್ರಾರಂಭ ಮಾಡಿದ್ದಾರೆ. 1-3-1999 ರಿಂದ ಅನಿರ್ದಿಷ್ಟ ಕಾಲದವರೆಗಿನ ಮುಷ್ಕರವನ್ನು ಮಾಡುತ್ತಿದ್ದಾರೆ. ಇದರಿಂದ ಬ್ಯಾಂಕ್‌ನ ಚಟುವಟಿಕೆಗೆ ಸಂಪೂರ್ಣ ಸ್ಥಗಿತಗೊಂಡಿದೆ. ಗ್ರಾಹಕರಿಗೆ ತೊಂದರೆಯಾಗಿದೆ. ಸಾಮಾನ್ಯವಾಗಿ ಡಿ.ಸಿ. ಬ್ಯಾಂಕ್ ಮತ್ತು ಅದರ ಶಾಖೆಗಳಲ್ಲಿ ಅನೇಕ ಸಹಕಾರಿ ಸಂಘಗಳು ವ್ಯವಹಾರವನ್ನು ಮಾಡುತ್ತೇವೆ. ಈಗ ಅವರುಗಳ ವ್ಯವಹಾರವೆಲ್ಲ ಸ್ಥಗಿತಗೊಂಡಿದೆ. ಆದ್ದರಿಂದ ಬ್ಯಾಂಕು ದಿನನಿತ್ಯದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಮತ್ತು ನೌಕರರ ನ್ಯಾಯಯುತವಾದ ಬೇಡಿಕೆಗಳೇನಿದೆ, ಅದನ್ನು ಈಡೇರಿಸಿ ಬ್ಯಾಂಕ್ ನ ಕಾರ್ಯಕಲಾಪ ನಡೆಸಿಕೊಂಡು ಹೋಗಲು ಸರ್ಕಾರ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ಹಾಸನದ ಡಿ.ಸಿ.ಸಿ. ಬ್ಯಾಂಕ್‌ನ ನೌಕರರು ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ನಾವು ಅಧಿಕಾರ ತೆಗೆದುಕೊಂಡಾಗ ಆ